# ಅವನೇ ಎಲ್ಲ

ಅವನು ನೋಡದ ಬಣ್ಣಗಳಿವೆಯೇ?
ಅವನಿಗೆ ತಿಳಿಯದ ಕನಸುಗಳಿವೆಯೇ?

ಅವನು ಓದದ ಕಣ್ಣುಗಳಿವೆಯೇ?
ಅವನು ಬರೆಯದ ತುಟಿಗಳಿವೆಯೇ?

ಅವನೇ ಬೀಜ, ಅವನೇ ಗರ್ಭ
ಅವನೇ ಅಜ್ಜ, ಅವನೇ ಮೊಮ್ಮಗ

ಅವನೇ ಜ್ವಾಲೆ, ಅವನೇ ಜಲಧಾರೆ
ಅವನೇ ಕ್ಷಿತಿಜ, ಅವನೇ ವರುಣೇಂದ್ರ

ಸಖಿಯರು ಇರಬಹುದು ಹದಿನಾರು ಸಾವಿರ
ಆದರೂ ಕುತೂಹಲದಿಂದ ಕೇಳುವ ಚೋರ

ಪ್ರತಿ ಒಬ್ಬರ ಹೃದಯ ಬಡಿತವ
ಎಲ್ಲ ತರಳೆಯರ ಬಳೆ ಶಬ್ದವ

● **ಎಂ.ಎಸ್. ಮೂರ್ತಿ**



# ಯಾವ ಬಳೆ ಕೊಳ್ಳಲಿ

ಯಾವ ಬಳೆ ಕೊಳ್ಳಲಿ ಕೃಷ್ಣ...
ತೊಟ್ಟರೆ
ನೀನೇ ಕೈಹಿಡಿದಂತಿರಬೇಕು
ಸಪ್ಪಳವಾದರೆ
ನಿನ್ನ ಕೊಳಲ ನಾದದಂತಿರಬೇಕು

ಬಳ್ಳಿಯಂತೆ ನಾ ಬಳುಕಬೇಕು
ನವಿಲು ಗರಿಯ ಕಣ್ಣಿನಲ್ಲೂ
ನೀನೇ ಕಾಣಬೇಕು
ಹೇಳು, ಯಾವ ಬಳೆಕೊಳ್ಳಲಿ

ನೀಲಿ ಬಳೆ ತೊಟ್ಟರೆ
ನಿನ್ನ ಬಣ್ಣ ನನ್ನ ಮೈಗೆ ಹತ್ತಬೇಕು

ಬಳ್ಳಿ ಚಿತ್ರದ ಬಳೆ ತೊಟ್ಟರೆ
ನೀ, ನನ್ನಪ್ಪಿದಂತಿರಬೇಕು
ಹೂವಿನದ್ದಾದರೆ...
ನಿನ್ನ ಮುತ್ತಿನಂತಿರಬೇಕು
ಹೇಳು ಕೃಷ್ಣಾ, ಯಾವ ಬಳೆ ಕೊಳ್ಳಲಿ

● **ಕಿರಣ ನಾಯ್ಕನೂರ**